# ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 47 |
| ಸದಸ್ಯರ ಹೆಸರು | ಶ್ರೀ ಸಂದೇಶ್ ನಾಗರಾಜ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 09.07.2018 |

| ಕ್ರಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ. | ಹೆಗ್ಗಡದೇವನಕೋಟೆ ತಾಲ್ಲೂಕು, ಬೇಗೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಭೀಮನಕೊಲ್ಲಿಯಿಂದ ಕಾಡಂಚಿನ ಗ್ರಾಮಗಳಾದ ಕಾಳಯ್ಯನಹಳ್ಳ ಮತ್ತು ಜಾಗನಕೋಟೆಗೆ ತೆರಳುವ ರಸ್ತೆಯು ಕೊರಕಲು ಬಿದ್ದು ಮಳೆಗಾಲದಲ್ಲಿ ಕೆಸರುಮಯವಾಗಿದ್ದು, ಸಾರ್ವಜನಿಕರ ಓಡಾಟಕ್ಕೆ ಬಹಳ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ |
| ಆ. | ಈ ಗ್ರಾಮಗಳಲ್ಲಿ ದಲಿತರು, ಬುಡಕಟ್ಟು ಜನರು ವಾಸ ಮಾಡುತ್ತಿದ್ದು, ಈ ರಸ್ತೆಯನ್ನು 1981 ರಲ್ಲಿ ಮೆಟ್ಲಿಂಗ್ ಮಾಡಿದ್ದು, ಅಲ್ಲಿಂದ ಈಚೆಗೆ ಡಾಂಬರೀಕರಣ ಮಾಡದೇ ಇರುವ ಕಾರಣ ಹದಗೆಟ್ಟಿರುವ ಈ ರಸ್ತೆಯನ್ನು ಪೂರ್ಣವಾಗಿ ದುರಸ್ತಿಗೊಳಿಸಿ ಡಾಂಬರೀಕರಣ ಮಾಡುವ ಮೂಲಕ ಸಾರ್ವಜನಿಕರ ಸಂಚಾರಕ್ಕೆ ಅನುಕೂಲ ಮಾಡಿಕೊಡಲು ಕ್ರಮ ತೆಗೆದುಕೊಳ್ಳಲಾಗುವುದೇ? | ಹೆಗ್ಗಡದೇವನಕೋಟೆ ತಾಲ್ಲೂಕು, ಬೇಗೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಭೀಮನಕೊಲ್ಲಿ ಯಿಂದ ಕಾಡಂಚಿನ ಗ್ರಾಮಗಳಾದ ಕಾಳಯ್ಯನಹಳ್ಳ ಮತ್ತು ಜಾಗನಕೋಟೆಯಲ್ಲಿ ಒಟ್ಟಾರೆ 520 ಜನಸಂಖ್ಯೆ ಇದ್ದು, ಈ ಪೈಕಿ 292 ಪರಿಶಿಷ್ಟ ಜನಾಂಗ, 103 ಪರಿಶಿಷ್ಟ ಪಂಗಡ ಜನಸಂಖ್ಯೆ ಇರುತ್ತದೆ.<br><br>ಈ ರಸ್ತೆಯು 5.00 ಕಿ.ಮೀ. ಉದ್ದವಿದ್ದು, ಡಿ.ಆರ್.ಆರ್.ಪಿ. ಸಂಖ್ಯೆ 0429 ರಲ್ಲಿ 2 ಕಿ.ಮೀ. ಹಾಗೂ 0551 ರಲ್ಲಿ 3.00 ಕಿ.ಮೀ. ಒಳಗೊಂಡಿರುತ್ತದೆ. ಈ ರಸ್ತೆಯು 5 ಮೀ. ಅಗಲವಿದ್ದು, ಮಣ್ಣಿನ ಮೇಲ್ಮೈ ರಸ್ತೆಯಾಗಿರುತ್ತದೆ. ಸದರಿ ರಸ್ತೆಯನ್ನು ಡಾಂಬರೀಕರಣ ಮಾಡಲು ರೂ.126.00 ಲಕ್ಷಗಳ ಅವಶ್ಯಕತೆ ಇರುತ್ತದೆ.<br><br>ಪ್ರಸಕ್ತ ಸಾಲಿನ ಮಳೆಹಾನಿಯಿಂದ ಹಾಳಾದ ರಸ್ತೆಯ ತುರ್ತು ದುರಸ್ತಿಯನ್ನು ರೂ.6.00 ಲಕ್ಷಗಳಲ್ಲಿ ಕೈಗೊಳ್ಳಲಾಗುವುದು.<br><br>ಅನುದಾನದ ಲಭ್ಯತೆಯನ್ನು ಆಧರಿಸಿ |

| | | |
|---|---|---|
| | | ರಸ್ತೆಯನ್ನು ಡಾಂಬರೀಕರಣಗೊಳಿಸಿ ಪೂರ್ಣ ಅಭಿವೃದ್ಧಿ ಮಾಡಲು ಕ್ರಮ ಕೈಗೊಳ್ಳಬೇಕಿದೆ. |

ಕಡತ ಸಂಖ್ಯೆ: ಗ್ರಾಅಪ:151/1:ಆರ್ಆರ್ಸಿ:18

**(ಕೃಷ್ಣ ಬೈರೇಗೌಡ)**

ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್, ಕಾನೂನು,
ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ
ವ್ಯವಹಾರಗಳು ಮತ್ತು ಶಾಸನ ರಚನಾ ಸಚಿವರು